# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 1057 |
| ಮಾನ್ಯ ಸದಸ್ಯರ ಹೆಸರು | ಶ್ರೀ ಆರ್.ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 16.03.2020 |
| ಉತ್ತರಿಸುವ ಸಚಿವರು | ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>2017-18 ರಿಂದ 2018-19ನೇ ಸಾಲಿನವರೆಗೆ ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದಂತೆ ಡಿ.ದೇವರಾಜ ಅರಸು ನಿಗಮದಿಂದ ಕೊಳವೆ ಬಾವಿಗಳನ್ನು ಕೊರೆಯಲು ನಿಗಧಿಪಡಿಸಲಾಗಿದ್ದ ಗುರಿಯೆಷ್ಟು;</td><td>2017-18 ರಿಂದ 2018-19ನೇ ಸಾಲಿನವರೆಗೆ ಶಿವಮೊಗ್ಗ ಜಿಲ್ಲೆಗೆ ನಿಗದಿಪಡಿಸಿದ ಕೊಳವೆ ಬಾವಿಗಳನ್ನು ಕೊರೆಯಲು ನಿಗಧಿಪಡಿಸಿದ ಗುರಿ - 413.<br>ವರ್ಷವಾರು ವಿವರ ಈ ಕೆಳಕಂಡಂತಿದೆ.<br>2017-18 : 276<br>2018-19 : 137</td></tr>
<tr><td>ಆ)</td><td>ಕೊರೆದಿರುವ ಕೊಳವೆ ಬಾವಿಗಳೆಷ್ಟು; ಕೊರೆಯಲು ಬಾಕಿ ಇರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)</td><td>ಕೊರೆದಿರುವ ಕೊಳವೆ ಬಾವಿಗಳ ಸಂಖ್ಯೆ : 274<br>ಕೊರೆಯಲು ಬಾಕಿ ಇರುವ ಕೊಳವೆ ಬಾವಿಗಳ ಸಂಖ್ಯೆ : 139<br>ವಿಧಾನಸಭಾ ಕ್ಷೇತ್ರವಾರು ವಿವರ ಈ ಕೆಳಕಂಡಂತಿದೆ
<table>
<tr><th>ಕ್ರ.ಸಂ</th><th>ವಿಧಾನ ಸಭಾ ಕ್ಷೇತ್ರದ ಹೆಸರು</th><th>ಕೊಳವೆ ಬಾವಿ ಕೊರೆಯಲು ಬಾಕಿ</th></tr>
<tr><td>1</td><td>ಶಿವಮೊಗ್ಗ ಗ್ರಾಮಾಂತರ</td><td>29</td></tr>
<tr><td>2</td><td>ಭದ್ರಾವತಿ</td><td>21</td></tr>
<tr><td>3</td><td>ಶಿವಮೊಗ್ಗ ನಗರ</td><td>0</td></tr>
<tr><td>4</td><td>ತೀರ್ಥಹಳ್ಳಿ</td><td>21</td></tr>
<tr><td>5</td><td>ಶಿಕಾರಿಪುರ</td><td>25</td></tr>
<tr><td>6</td><td>ಸೊರಬ</td><td>22</td></tr>
<tr><td>7</td><td>ಸಾಗರ</td><td>21</td></tr>
<tr><td colspan="2">ಒಟ್ಟು</td><td>139</td></tr>
</table></td></tr>
<tr><td>ಇ)</td><td>ಕೊರೆದಿರುವ ಕೊಳವೆ ಬಾವಿಗಳಲ್ಲಿ ವಿದ್ಯುದ್ದೀಕರಣ ಆಗದಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು;</td><td>ವಿದ್ಯುದ್ದೀಕರಣ ಆಗದಿರುವ ಕೊಳವೆ ಬಾವಿಗಳ ಸಂಖ್ಯೆ : 42<br>42 ಕೊಳವೆ ಬಾವಿಗಳು ವಿದ್ಯುತ್ ಸರಬರಾಜು ಕಂಪನಿಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲು ಬಾಕಿ ಇದ್ದು, ವಿದ್ಯುದ್ದೀಕರಣಗೊಳಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.</td></tr>
<tr><td>ಈ)</td><td>ಪಂಪ್ ಮೋಟಾರ್ ಅಳವಡಿಕೆಗಾಗಿ ಬಾಕಿ ಇರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು;</td><td>ಕೊರೆದಿರುವ ಎಲ್ಲಾ ಕೊಳವೆ ಬಾವಿಗಳಿಗೆ ಪಂಪ್ ಮೋಟಾರ್ ಅಳವಡಿಸಲಾಗಿದೆ.</td></tr>
<tr><td>ಉ)</td><td>ಬಾಕಿ ಇರುವ ಪ್ರಕರಣಗಳನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ? (ವಿವರ ನೀಡುವುದು)</td><td>2017-18ನೇ ಸಾಲಿನ ಕೊಳವೆ ಬಾವಿಗಳ 2 ಫಲಾನುಭವಿಗಳ ಜಮೀನಿನ ಬಗ್ಗೆ ತಕರಾರರು ಇರುವುದರಿಂದ ಕೊಳವೆ ಬಾವಿಗಳನ್ನು ಕೊರೆದಿರುವುದಿಲ್ಲ. ತಕರಾರು ಇತ್ಯರ್ಥಗೊಂಡ ನಂತರ ಕೊರೆಯಿಸಲಾಗುವುದು.<br><br>2018-19ನೇ ಸಾಲಿನ ಕೊಳವೆ ಬಾವಿಗಳನ್ನು ಕೊರೆಯಲು ದಿನಾಂಕ:04-01-2019ರಂದು ಟೆಂಡರ್ ಆಹ್ವಾನಿಸಲಾಗಿತ್ತು ಆದರೆ ಮಾನ್ಯ ಉಚ್ಚ ನ್ಯಾಯಾಲಯ, ಕಲಬುರಗಿ ಪೀಠ ದಿನಾಂಕ:09-04-2019ರ ರಂದು ನೀಡಿದ ಮಧ್ಯಂತರ ಆದೇಶದಲ್ಲಿ ಟೆಂಡರ್‌ಗೆ ತಡೆಯಾಜ್ಞೆ ನೀಡಿದ್ದರಿಂದ ಪ್ರಕ್ರಿಯೆ ಸ್ಥಗಿತಗೊಳಿಸಲಾಗಿದ್ದು,</td></tr>
</table>

| | | |
|---|---|---|
| | | ಪ್ರಸ್ತುತ ಮಾನ್ಯ ಉಚ್ಚನ್ಯಾಯಾಲಯ, ಕಲಬುರಗಿ ಪೀಠ ದಿನಾಂಕ:15-10-2019ರ ಆದೇಶದಲ್ಲಿ ಟೆಂಡರ್ ರದ್ದುಪಡಿಸಿ ಹೊಸದಾಗಿ ಟೆಂಡರ್ ಆಹ್ವಾನಿಸಲು ನಿರ್ದೇಶಿಸಿದ ಮೇರೆಗೆ ನಿಗಮದಿಂದ ದಿನಾಂಕ:31-12-2019ರಂದು ಹೊಸದಾಗಿ ಟೆಂಡರ್ ಆಹ್ವಾನಿಸಲಾಗಿರುತ್ತದೆ<br>ಈ ಹಿನ್ನೆಲೆಯಲ್ಲಿ 2018-19ನೇ ಸಾಲಿನ ಕೊಳವೆ ಬಾವಿಗಳನ್ನು ಕೊರೆಯಿಸಲು ವಿಳಂಬವಾಗಿದ್ದು. ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಕೊಳವೆ ಬಾವಿಗಳನ್ನು ಶೀಘ್ರವಾಗಿ ಕೊರೆಯಿಸಲು ಎಲ್ಲಾ ಅವಶ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |

ಸಂ: ಹಿಂವಕ 175 ಬಿಎಂಎಸ್ 2020

(ಬಿ.ಶ್ರೀರಾಮುಲು)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ